ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.422/2024

| | | |
|---|---|---|
| ಸಾಕ್ಷಿಯ ಹೆಸರು | : ಸುರೇಶ್ ಕುಮಾರ್ | ಸಿ.ಡಬ್ಲ್ಯು 4 |
| ತಂದೆಯ ಹೆಸರು | : ಜೈರಾಂ | ಪಿ.ಡಬ್ಲ್ಯು 2 |
| ವಯಸ್ಸು | : 49 ವರ್ಷ | |
| ಉದ್ಯೋಗ | : ಕೆ.ಎಸ್.ಆರ್.ಟಿ.ಸಿ ಚಾಲಕ | |
| ವಾಸ ಸ್ಥಳ | : ಭದ್ರಾವತಿ ಡಿಪೋ | |

ದಿನಾಂಕಃ21.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾಸ-1 ನಮ್ಮ ಬಸ್ಸಿನ ನಿರ್ವಾಹಕ ಇರುತ್ತಾರೆ. ಆರೋಪಿಯ ಪರಿಚಯ ಇದೆ. ದಿನಾಂಕ 20.01.2024 ರಂದು ಕೆ.ಎಸ್.ಆರ್.ಟಿ.ಸಿ ಬಸ್ ನಂ. ಕೆ.ಎ.17 ಎಫ್.1252 ಕ್ಕೆ ಚಾಲಕ ಆಗಿದ್ದೆನು ಮತ್ತು ಚಾಸ-1 ನಿರ್ವಾಹಕ ಆಗಿದ್ದರು. ನಾವು ಬೆಳಗ್ಗೆ 10.15 ಕ್ಕೆ ಭಧ್ರಾವತಿಯಿಂದ ಹೊರಟು ಎಂ.ಸಿ. ಹಳ್ಳಿಯ ಮೂಲಕ ತರೀಕೆರೆ ಪಟ್ಟಣಕ್ಕೆ ಬಂದೆವು. ನ್ಯಾಯಾಲಯದ ಮುಂದೆ ಇರುವ ಆರೋಪಿ ಗಂಟೆ ಕಣಿವೆ ಗ್ರಾಮದ ಇಳಿಜಾರಿನಲ್ಲಿ ಸ್ಟಾಪ್ ಇಲ್ಲದ ಸ್ಥಳದಲ್ಲಿ ಕೈ ಅಡ್ಡ ಹಾಕಿದ್ದಾನೆ ಅಲ್ಲಿ ಸ್ಟಾಪ್ ಇಲ್ಲದ ಕಾರಣ ನಾನು ಬಸ್ ಅನ್ನು ನಿಲ್ಲಿಸಿಲ್ಲ. ನಾವು ತರೀಕೆರೆ ಬಸ್ ನಿಲ್ದಾಣಕ್ಕೆ ಬಂದು ಅರಮನೆ ಹೋಟೆಲ್ ನಲ್ಲಿ ಚಹಾ ಕುಡಿಯುತ್ತಿದ್ದಾಗ ಆರೋಪಿ ಬೈಕ್ ನಲ್ಲಿ ಅಲ್ಲಿಗೆ ಬಂದನು. ಆತನು ನನಗೆ ಮತ್ತು ಚಾಸ-1 ಇವರಿಗೆ ಬೋಳಿ ಮಕ್ಕಳೆ,ಸೂಳೇ ಮಕ್ಕಳೆ ಬಸ್ ನಿಲ್ಲಿಸಲಿಲ್ಲ ಎಂದು ಬೈಯಲು ಪ್ರಾರಂಭ ಮಾಡಿದನು. ನಾವು ಪ್ರಶ್ನೆ ಮಾಡಿದಾಗ ಆರೋಪಿಯು ತನ್ನ ಕೈಯಿಂದ ಚಾಸ-1 ಇವರ ಕೆನ್ನೆಗೆ ಹೊಡೆದನು ಮತ್ತು ನಾವು ಮುಂದಿನ ಕರ್ತವ ಕ್ಕೆ ಹೋಗಲು ಅಡ್ಡಿಯನ್ನು ಕೂಡ ಮಾಡಿರುತ್ತಾನೆ. ಚಾಸ-1 ಇವರ ಕಿವಿಯ ಮೇಲೆ ಹಲ್ಲೆ ಆಗಿದ್ದ ಕಾರಣ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಕಾರಣ ನಾವು ಬಸ್ ಅನ್ನು ತರೀಕೆರೆಯ ಬಸ್ ನಿಲ್ದಾಣದಲ್ಲಿಯೇ ಬಿಟ್ಟು ಆಟೋದಲ್ಲಿ ಸರ್ಕಾರಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆಯನ್ನು ಕೊಡಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ಆ ದಿನ ಚಾಸ-1 ರವರಿಗೆ ಹಲ್ಲೆ ಮಾಡಿರುತ್ತಾನೆ. ಪೋಲೀಸರಿಗೆ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಕರ್ತವ್ಯದ ಮೇಲೆ ಇದ್ದೇ ಎಂದು ತೋರಿಸಲು ಟ್ರಿಪ್ ಶೀಟ್ ಅನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಭದ್ರಾವತಿಯಿಂದ ತರೀಕೆರೆ ಬಸ್ಸು ಆರ್ಡಿನರಿ ಲೋಕಲ್

ಸರ್ವೀಸ್ ಬಸ್ಸು ಎಂದರೆ ಸರಿ. ಭದ್ರಾವತಿ ಬಸ್ ನಿಲ್ದಾಣದಿಂದ ತರೀಕೆರೆ ಬಸ್ ನಿಲ್ದಾಣದವರೆಗೆ ಒಟ್ಟು 10-12 ಸ್ಟಾಪ್ ಗಳು ಬರುತ್ತವೆ. ಅವುಗಳ ಹೆಸರು ಹೇಳಲು ಬರುತ್ತದೆ. ಸ್ಟಾಪ್ ಇಲ್ಲದೇ ಇರುವ ಕಡೆಯಲ್ಲಿ ಸಾಮಾನ್ಯವಾಗಿ ನಾವು ಬಸ್ಸನ್ನು ನಿಲ್ಲಿಸುವುದಿಲ್ಲ. ಆ ದಿನ ನಮ್ಮ ಬಸ್ ನಲ್ಲಿ ಸುಮಾರು 10-15 ಜನ ಪ್ರಯಾಣಿಕರು ಇದ್ದಿರಬಹುದು. ಆ ವಿಷಯವನ್ನು ಪೋಲೀಸರಿಗೆ ತಿಳಿಸಿದ್ದೇನೆ. ಭದ್ರಾವತಿಯಿಂದ ನಾವು 10.15 ಗೆ ಹೊರಟ್ಟಿದ್ದೆವು. ತರೀಕೆರೆಗೆ ಬರಲು ಸುಮಾರು 1 ಗಂಟೆ ಬೇಕಾಗುತ್ತದೆ. ಹೈವೇ ಕಾಮಗಾರಿ ನಡೆಯುತ್ತಿದ್ದರಿಂದ ಇನ್ನು ಹೆಚ್ಚಿನ ಸಮಯ ಬೇಕಾಗುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ವಿವರಗಳನ್ನು ನಾನು ಪೋಲೀಸರ ಮೂಲಕ ತಿಳಿದುಕೊಂಡಿದ್ದೇನೆ. ಘಟನೆ ನಡೆದಾಗ ಬೇರೆ ಸಾರ್ವಜನಿಕರು ಕೂಡ ಇದ್ದರು.

ಆರೋಪಿ ಸ್ಟಾಪ್ ಇದ್ದ ಸ್ಥಳದಲ್ಲಿಯೇ ಕೈಯನ್ನು ತೋರಿಸಿದ್ದಾನೆ ನಾನು ಅದನ್ನು ನಿರ್ಲಕ್ಷಿಸಿ ಬಸ್ ಅನ್ನು ಚಾಲನೆ ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಅದರ ಬಗ್ಗ ಟಿ.ಸಿ ಯವರಿಗೆ ದೂರನ್ನು ಕೊಡಲು ಮಾತ್ರ ಆರೋಪಿ ತರೀಕೆರೆಯ ಬಸ್ ನಿಲ್ದಾಣಕ್ಕೆ ಬಂದಿದ್ದ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ, ಆರೋಪಿ ನನಗೆ ಅಥವಾ ಚಾಸ-1 ರವರಿಗೆ ಅವಾಚ್ಯವಾಗಿ ಬೈದಿಲ್ಲ ಎಂದರೆ ಸರಿಯಲ್ಲ ಮತ್ತು ಚಾಸ-1 ರವರಿಗೆ ಹಲ್ಲೆ ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ಆತನು ನಮ್ಮ ಕರ್ತವ್ಯಕ್ಕೆ ಯಾವುದೇ ರೀತಿ ಅಡಚಣೆ ಉಂಟು ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.